ವಿಪ ನಿ - 72
ಕ್ರ ಸಂಖ್ಯೆ - 64

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 372 ಹೆಚ್ಎಸ್ಎಂ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 18-11-2021

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ರವರು ನಿಯಮ-72 ರಡಿಯಲ್ಲಿನ ನೀಡಿರುವ ಸೂಚನೆಗೆ ಮಾನ್ಯ ಸಚಿವರ ಹೇಳಿಕೆ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಪರಿಷತ್ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ರವರು ನಿಯಮ-72 ರಡಿಯಲ್ಲಿನ ಗಮನ ಸೆಳೆಯುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆಯ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಯ. ಶಿವಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಸಾಮಾ - 72
ಕ್ರಮಸಂಖ್ಯೆ - 64

## ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ಇವರು "ರಾಜ್ಯದಲ್ಲಿ ಪಿ.ಯು.ಸಿ. ನಂತರ 05 ವರ್ಷಗಳ ವ್ಯಾಸಂಗ ಮತ್ತು 01 ವರ್ಷ ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ಇಂಟರ್ನ್‌ಷಿಪ್ ತರಬೇತಿ ನೀಡುವ ಫಾರ್ಮಾ-ಡಿ (ಡಾಕ್ಟರ್ ಆಫ್ ಫಾರ್ಮಾ) ಕೋರ್ಸ್‌ನ್ನು 2008ರ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗಿದ್ದು, ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಈ ಪದವಿ ವ್ಯಾಸಂಗ ಮಾಡಿ ಹೊರಬರುತ್ತಿದ್ದಾರೆ. ಇದು ಕ್ಲಿನಿಕಲ್ ರಿಸರ್ಚ್ ಓರಿಯಂಟೆಡ್ ಪ್ರೋಗ್ರಾಮ್ ಆಗಿದ್ದು, ಈ ಕೋರ್ಸ್‌ನಲ್ಲಿ ಫಾರ್ಮಸಿ ಮತ್ತು ಮೆಡಿಕಲ್ ಸ್ಟಾಫ್ ನಡುವೆ ಸಮನ್ವಯ ಸಾಧಿಸುವ ಮತ್ತು ವೈದ್ಯರು ರೋಗಿಗಳಿಗೆ ಔಷಧಿ ಸೂಚಿಸುವಾಗ ಕಾನೂನಿನ ಎಲ್ಲ ನಿಬಂಧನೆಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು ಸಹಕಾರಿಯಾಗುವ ಮತ್ತು ದೀರ್ಘಕಾಲದ ಕಾಯಿಲೆಗೆ ಚಿಕಿತ್ಸೆ ನೀಡಿ ರೋಗಿಯ ಜೀವನದ ಗುಣಮಟ್ಟವನ್ನು ಸುಧಾರಿಸುವ ಹಲವಾರು ವಿಷಯಗಳನ್ನು ಅಧ್ಯಯನ ಮಾಡಿರುತ್ತಾರೆ. ಈ ಫಾರ್ಮ-ಡಿ ಪದವೀಧರರನ್ನು ಎಲ್ಲ ಸರ್ಕಾರಿ/ಖಾಸಗಿ ಆಸ್ಪತ್ರೆಗಳ:ಲ್ಲಿ "ಕ್ಲಿನಿಕಲ್ ಫಾರ್ಮಸಿಸ್ಟ್" ಹುದ್ದೆಯಲ್ಲಿ ನೇಮಿಸಿಕೊಳ್ಳುವಂತೆ ಭಾರತ ಸರ್ಕಾರದ ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ದಿನಾಂಕ:30.06.2021 ರಂದು ಗೆಜೆಟ್ ಅಧಿಸೂಚನೆ ಹೊರಡಿಸಿದೆ. ಇದಕ್ಕನುಸಾರವಾಗಿ ಫಾರ್ಮ-ಡಿ ಪದವೀಧರನ್ನು ರಾಜ್ಯದ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಯಲ್ಲಿ "ಕ್ಲಿನಿಕಲ್ ಫಾರ್ಮಸಿಸ್ಟ್" ಹುದ್ದೆಯಲ್ಲಿ ನೇಮಿಸಿಕೊಂಡು ಇವರಿಗೆ ಉದ್ಯೋಗಾವಕಾಶ ನೀಡಬೇಕು ಮತ್ತು ರಾಜ್ಯದಲ್ಲಿ ವೈದ್ಯರ ಕೊರತೆ ನೀಗಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು" ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ;

*****

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕಿರಿಯ ಫಾರ್ಮಾಸಿಸ್ಟ್, ಹಿರಿಯ ಫಾರ್ಮಾಸಿಸ್ಟ್, ಪದವೀಧರ ಫಾರ್ಮಾಸಿಸ್ಟ್ ಮತ್ತು ಚೀಫ್ ಫಾರ್ಮಾಸಿಸ್ಟ್ ವೃಂದಗಳು ಅಸ್ತಿತ್ವದಲ್ಲಿದ್ದು, ಈ ಹುದ್ದೆಗಳಲ್ಲಿನ ಅಧಿಕಾರಿ/ನೌಕರರು ಔಷಧಿ ಸಂಗ್ರಹಣೆ ಮತ್ತು ವಿತರಣೆ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ, "ಕ್ಲಿನಿಕಲ್ ಫಾರ್ಮಾಸಿಸ್ಟ್" ಹುದ್ದೆಯು ಇಲಾಖೆಯಲ್ಲಿ ಮಂಜೂರು ಆಗಿರುವುದಿಲ್ಲ ಹಾಗೂ ಈ ಹುದ್ದೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿರುವುದಿಲ್ಲ. ಹೀಗಾಗಿ, ಫಾರ್ಮಾ-ಡಿ ವಿದ್ಯಾರ್ಹತೆ ಪೂರೈಸಿರುವ ಅಭ್ಯರ್ಥಿಗಳನ್ನು "ಕ್ಲಿನಿಕಲ್ ಫಾರ್ಮಾಸಿಸ್ಟ್" ಹುದ್ದೆಗೆ ನೇಮಿಸಿಕೊಳ್ಳಲು ಅವಕಾಶ ಇರುವುದಿಲ್ಲ.

ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾದಿಂದ ದಿನಾಂಕ: 30.06.2021 ರಂದು ಹೊರಡಿಸಿರುವ ಗೆಜೆಟ್ ಅಧಿಸೂಚನೆಯನ್ವಯ ಫಾರ್ಮಾ-ಡಿ ಪದವೀಧರನ್ನು "ಕ್ಲಿನಿಕಲ್ ಫಾರ್ಮಾಸಿಸ್ಟ್" ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳಲು ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಯಲ್ಲಿ "ಕ್ಲಿನಿಕಲ್ ಫಾರ್ಮಾಸಿಸ್ಟ್" ಹುದ್ದೆಯ ಅವಶ್ಯಕತೆ / ಅನಿವಾರ್ಯತೆಯನ್ನು ಪರಿಶೀಲಿಸಿ ಸೃಜನೆ ಮಾಡಲು ಕ್ರಮ ಕೈಗೊಂಡು, ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದ ನಂತರದಲ್ಲಿ ನೇಮಕಾತಿ ಬಗ್ಗೆ ಕ್ರಮವಹಿಸಬೇಕಾಗಿರುತ್ತದೆ.

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ: ಆಕುಕ 372 ಹೆಚ್‌ಎಸ್‌ಎಂ 2021